ಅಪರೂಪಕ್ಕೆ ಯಾವಾಗಾದರೂ ಒಮ್ಮೆ ಗೆಳತಿಯ ಅಪ್ಪ ಅವರ ಹೊಲದ ಕೆಲಸವನ್ನು ಬರಖಾಸ್ತು ಮಾಡಿ, ಟ್ರ್ಯಾಕ್ಟರಿನ ಮುಂದಣ ಮುಸುಡಿಯನ್ನಷ್ಟೇ ಶೆಡ್ಡಿನಿಂದ ಹೊರತೆಗೆದು, ದಬುಕು ದಬುಕು ಕುಳಿತ ನಾವೆಲ್ಲರೂ ಕುಲುಕಾಡಿಕೊಂಡು ಸಾಲೀ ಗೇಟು ಮುಟ್ಟುವಷ್ಟು ಉಪಕಾರ ಮಾಡಿ ಮನೆಗೆ ಮರಳುತ್ತಿದ್ದರು. ಭಯಂಕರ ಒಳ್ಳೆಯ ಉಮೇದಿಯಲ್ಲಿ ಇದ್ದರೆ ಬಜಾರಿನ ಬಿಸಿ ಮಿರಚಿ, ಮಂಡಕ್ಕಿಗಳೂ ಉಡುಗೊರೆಯಾಗಿ ಸಿಕ್ಕು, ದಿನವೂ ಮಳೆಬರಬಾರದೇ ಎಂದು ಸಹ ಅನಿಸುವುದಿತ್ತು. ಅದಿಲ್ಲವಾದರೆ ನಮ್ಮ ಯಾವತ್ತಿನ ಹವಾಯಿ ಚಪ್ಪಲಿಗಳನ್ನು ಮೆಟ್ಟಿಕೊಂಡು, ಚರಕು ಚರಕು ಮಾಡುತ್ತ ಕೆಸರನ್ನು ಹಿಂದಲ ಅಂಗಿಗೆ ಸಿಡಿಸಿಕೊಂಡು ನಡೆದು ಹೋಗುತ್ತಿರುವಾಗ ಕರುಣೆಯಿದ್ದರೆ ಖಂಡಿತ ತರುಬುತ್ತಿದ್ದ ಕೆಂಪು ಬಸ್ಸಿನಲ್ಲಿ ಹತ್ತಿಕೊಂಡರೆ ಎಂಥ ಖುಷಿ! ಮುಕ್ಕಾಲು ವಾಸಿ ದಾರಿಯಾದರೂ ಫುಟ್ಬೋರ್ಡಿನ ಮೇಲೇ ನಿಂತುಕೊಂಡು, ಹೊಸ ಊರಿನ ಬಜಾರಿನಲ್ಲಿ ಇಳಿದು, ಅಲ್ಲಿಂದ ಮುಂದಕ್ಕೆ ಶಾಲೆಗೆ ನಮ್ಮ ಮಿನಿ ತೇರುಗಳು ಸಾಗಿಹೋಗುತ್ತಿದ್ದವು. ದಾರಿಯಲ್ಲಿ ಅಡ್ಡಬರುತ್ತಿದ್ದ ಸ್ಟೇಷನ್ನಿನಲ್ಲಿ ರೈಲು ಅಮವಾಸ್ಯೆಗೋ ಹುಣಿವಿಗೋ ಬರುತ್ತಿತ್ತು ಎಂಬುದು ಖಚಿತವಾಗಿ ಗೊತ್ತಿದ್ದರೂ, ದಾಟಬೇಕಾದ ರೈಲುಹಳಿಗಳನ್ನು ಏನೋ ಅದರ ರೈಲಿನ ನಿರೀಕ್ಷೆಯಲ್ಲಿ ಇದ್ದವರಂತೆ ಹಣೆಗೆ ಕೈಹಚ್ಚಿ, ಹನುಕುತ್ತಿದ್ದ ನೀರಿನ ಹನಿಗಳನ್ನು ಕೊಡವಿಕೊಂಡು ಕಾದುನೋಡಿದಂತೆ ಮಾಡಿ, ನಿಟ್ಟುಸಿರಿನೊಂದಿಗೆ ನಮ್ಮ ತೇರು ಮುಂದುವರಿಯುತ್ತಿತ್ತು. ನೇತಾಜಿ ರೋಡಿನಲ್ಲಿ ನಮ್ಮ ಗುಂಪಿಗೆ ಸೇರಿಕೊಳ್ಳುತ್ತಿದ್ದ ಗೆಳತಿಯರ ಗುಂಪಿನೊಡನೆ ಆ ದಿನದ ಹುಣಸಿ ಚಿಗುಳಿಯ ಸಂತರ್ಪಣೆ ಯಾರದ್ದು ಎಂಬ ಚರ್ಚೆ ಸುರುವಾದರೆ ಮಳೆಯೂ ಆಪ್ತವಾಗಿಬಿಡುತ್ತಿತ್ತು!

ಸಿನಿಮಾದಲ್ಲಿ ಮಳೆಹಾಡು ನೋಡಿ ಮನಸ್ಸು ಸೋತುಹೋಗಿತ್ತು ಎಂದು ಹೇಳಿದೆನಲ್ಲವೇ? ಕ್ಲಾಸಿನಲ್ಲಿ ಜೀವಕ್ಕೆ ಜೀವ ಅಲ್ಲದಿದ್ದರೂ, ಮೆಂಡರು, ಬುಕ್ಕು, ಪೆನ್ನು, ಇಂಕು, ಬುತ್ತಿ ಮುಂತಾದವುಗಳನ್ನು ಅವರವರ ನಡುವೆ ಕೊಟ್ಟುಕೊಳ್ಳುವ ಇಬ್ಬರು ಗೆಳತಿಯರು ಇದ್ದರು. ಅದರಲ್ಲಿ ಒಬ್ಬಾಕೆ ಆಗಿನ ದಿನಗಳ ಯಾವ ನಾಯಕಿಯ ತಲೆಯನ್ನು ಎಲ್ಲಿ ನೋಡಿ ಮರುಳಾಗಿದ್ದಳೋ, ಮುಂದಲೆಯಲ್ಲಿ ಸಾಧನಾ ಕಟಿಂಗ್ ಮಾಡಿಸಿಕೊಂಡು ಮರುದಿವಸ ಶಾಲೆಗೆ ಅಡಿಯಿಟ್ಟಿದ್ದಳು. ಉಳಿದವಳು, ರವಿಚಂದ್ರನನ ಪರಮ ಫ್ಯಾನಾಗಿದ್ದರಿಂದ, ಕಟಿಂಗು ಮಾಡಿಸಿಕೊಂಡ ಕಟ್ಟಾ ಗೆಳತಿಯನ್ನು 'ಏನೇ, ಹೊಸಾ ಸ್ಟೈಲು, ಒಳ್ಳೇ ರವಿಚಂದ್ರನನ ಮೀಸಿ ಇದ್ದಾಂಗ ಐತೆಲ್ಲ' ಎಂದು ಹೇಳಿ, ಈ ಮಾತಿಗೆ ಸುರುವಾದ ಅವರ ಜಗಳದ ಮಳೆ ಸುರಿದು, ಆ ಮನಸ್ತಾಪದ ಸಿನಿಮಾ ಮುಗಿದು ಇಂದಿಗೆ ಮುವ್ವತ್ತು ವರ್ಷಗಳಾಗಿದ್ದರೂ, ಅವರಿಬ್ಬರ ನಡುವೆ ನಿಂತುಹೋದ ಮಾತಿನ ರೈಲು, ಥೇಟು ನಮ್ಮ ಬೊಮ್ನಳ್ಳಿ ರೈಲಿನಂತೆಯೇ ಇವತ್ತಿಗೂ ಓಡಾಡಿಲ್ಲ. ಮಳೆ ಸುರಿದಾಗಲೆಲ್ಲ ಅವರಿಬ್ಬರ ನೆನಪಾಗುತ್ತದೆ. ಕಾಲಬದಲಾಗಿದೆ, ಎಲ್ಲರೂ ಬದಲಾಗಿದ್ದಾರೆ. ಆದರೆ ರವಿಚಂದ್ರನನ ಮೀಸಿ ಮಾತ್ರ ಹಾಗೇ ಇದೆಯಲ್ಲ ಅನಿಸಿ ಅಚ್ಚರಿಯಾಗುತ್ತದೆ.

ಮಳೆಗಾಲ ನನಗೆ ಮತ್ತೆ ಮತ್ತೆ ನೆನಪಿಸುವ ಮತ್ತೊಂದು ಸಂಗತಿಯೆಂದರೆ, ಓದಿದ, ಓಡಾಡಿದ ವಿಶ್ವವಿದ್ಯಾಲಯದ ಅಂಗಳ. ಬಿರುಬೇಸಗೆಯಲ್ಲಿ ಬೆಂಗಾಡಿನಂತೆ ಬರಗೆಟ್ಟುಹೋಗಿರುತ್ತಿದ್ದ ಇಡೀ ಪರಿಸರ, ಮಳೆ ಬೀಳುತ್ತಲೂ ಧರೆಗಿಳಿದ ಸ್ವಿಡ್ಜರುಲೆಂಡಿನ ಹಾಗೇ ತೋರುತ್ತಿತ್ತು. ನಾನಂತೂ ಕವಿತೆಯ ಅದೆಷ್ಟು ದೋಣಿಗಳನ್ನು ಮಾಡಿ ಮಾಡಿ ತೇಲಿಬಿಡುತ್ತಿದ್ದೆನೋ! ಹೆಣ್ಣುಜೀವಗಳಿಗೆ ಮಳೆ ಎಂದರೆ ವರ್ಷಋತುವೇ ಆಗಬೇಕಿಲ್ಲವಲ್ಲ ಎಂಬುದು ನನ್ನ ಭಾವನೆ. ಯಾಕೆ ಕೇಳಿ, ಇದಕು ಅದಕು ಅವರಿವರು ಆಡುವ ಮಾತುಗಳಿಗೆ ಮನಸು ಮುದುಡಿಹೋದರೆ ಆಯಿತಲ್ಲ, ಆಗಿಂದಾಗಲೇ